**National**
**Kannada**
**08.04.2025 1310 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

**1.** ಭಾರತ-ಪೋರ್ಚುಗಲ್ ನಡುವೆ ಐತಿಹಾಸಿಕ ಬಾಂಧವ್ಯ - ರಾಷ್ಟ್ರಪತಿ ದ್ರೌಪದಿ ಮುರ್ಮು

**2.** ಮುದ್ರಾ ಸಾಲ ಯೋಜನೆ; ಶೇಕಡ ೭೦ ರಷ್ಟು ಪರಿಶಿಷ್ಟರು ಮತ್ತು ಹಿಂದುಳಿದ ವರ್ಗದವರು ಫಲಾನುಭವಿಗಳು - ಪ್ರಧಾನಿ ನರೇಂದ್ರ ಮೋದಿ

**3.** ಡೊನಾಲ್ಡ್ ಟ್ರಂಪ್ ಸುಂಕ ನೀತಿಗೆ ಜಾಗತಿಕ ನಾಯಕರ ವಿರೋಧ; ಷೇರು ಮಾರುಕಟ್ಟೆ ಅಲ್ಪ ಚೇತರಿಕೆ

**4.** ಪಿಯುಸಿ ಫಲಿತಾಂಶ ಪ್ರಕಟ: ಶೇಕಡ ೭೩.೪೫ ರಷ್ಟು ವಿದ್ಯಾರ್ಥಿಗಳು ತೇರ್ಗಡೆ - ವಿದ್ಯಾರ್ಥಿನಿಯರೇ ಮೈಲುಗೈ

**5.** ಐಪಿಎಲ್ ಕ್ರಿಕೆಟ್; ಇಂದು ಕೊಲ್ಕತ್ತಾ ನೈಟ್‌ರೈಡೆರ್ಸ್ - ಲಕ್ನೋ ಸೂಪರ್ ಜೈಂಟ್ಸ್, ಚೆನ್ನೈ ಸೂಪರ್ ಕಿಂಗ್ಸ್- ಪಂಜಾಬ್ ಕಿಂಗ್ಸ್ ಮುಖಾಮುಖಿ

<><><><>

ಭಾರತ-ಪೋರ್ಚುಗಲ್ ನಡುವೆ ಐತಿಹಾಸಿಕ ಬಾಂಧವ್ಯವಿದ್ದು, ವಿವಿಧ ವಲಯಗಳಲ್ಲಿ ಉತ್ತಮ ಸಹಕಾರವಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಪೋರ್ಚುಗಲ್ ಪ್ರವಾಸದಲ್ಲಿರುವ ಅವರಿಗೆ ಲಿಸ್‌ಬೆನ್‌ನಲ್ಲಿ ನಿನ್ನೆ ಅಲ್ಲಿನ ಅಧ್ಯಕ್ಷ ರೆಬೆಲ್ಲೊ ಡಿಸೌಸಾ ಅವರು ಆಯೋಜಿಸಿದ್ದ ಔತಣಕೂಟದಲ್ಲಿ ಪಾಲ್ಗೊಂಡು ಮಾತನಾಡಿದ ರಾಷ್ಟ್ರಪತಿ ಅವರು, ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳು ವೈವಿಧ್ಯಮಯ ಚಟುವಟಿಕೆಗಳನ್ನು ನಡೆಸುತ್ತಿವೆ. ಜಾಗತಿಕ ಹಿತದೃಷ್ಟಿಯಿಂದ ಅತ್ಯುತ್ತಮ ಸಹಕಾರದಿಂದ ಕಾರ್ಯನಿರ್ವಹಿಸುತ್ತಿವೆ. ಎರಡೂ ದೇಶಗಳು ಉಜ್ವಲ ಹಾಗೂ ದೂರದೃಷ್ಟಿಯ ನಾಯಕತ್ವ ಹೊಂದಿವೆ ಎಂದು ಹೇಳಿದರು.

<><><><>

ಪಿಎಂ ಮುದ್ರಾ ಯೋಜನೆ ಜಾರಿಯಾಗಿ ಇಂದಿಗೆ ೧೦ ವರ್ಷ ಪೂರ್ಣಗೊಂಡಿದೆ. ೨೦೧೫ರ ಏಪ್ರಿಲ್ ೮ ರಂದು ಈ ಯೋಜನೆ ಜಾರಿಗೊಳಿಸಲಾಗಿತ್ತು. ಈವರೆಗೆ ೫೨ ಕೋಟಿಗೂ ಅಧಿಕ ಮಂದಿಗೆ, ೩೨.೬೧ ಲಕ್ಷ ಕೋಟಿ ರೂಪಾಯಿ ಮೊತ್ತದ ಸಾಲ ಸೌಲಭ್ಯ ಒದಗಿಸಲಾಗಿದೆ. ಉದ್ಯೋಗ ಒದಗಿಸುವ ಹಾಗೂ ಉದ್ಯಮಿಗಳನ್ನು ರೂಪಿಸುವ ಉದ್ದೇಶದಿಂದ ಪಿಎಂ ಮುದ್ರಾ ಯೋಜನೆ ಜಾರಿಗೆ ತರಲಾಗಿತ್ತು. ನಗರ, ಸಣ್ಣ ಪಟ್ಟಣಗಳು, ಹಳ್ಳಿಗಳಲ್ಲಿ ಕೋಟ್ಯಾಂತರ ಮಂದಿ ಉದ್ಯಮಿಗಳಾಗಿ ರೂಪುಗೊಂಡಿದ್ದಾರೆ. ಶಿಶು ಯೋಜನೆಯಡಿ ಗರಿಷ್ಠ ೫೦ ಸಾವಿರ ರೂಪಾಯಿ, ಕಿಶೋರ್ ಯೋಜನೆಯಡಿ ಗರಿಷ್ಠ ೫ ಲಕ್ಷ ರೂಪಾಯಿ, ತರುಣ್ ಯೋಜನೆಯಡಿ ೧೦ ಲಕ್ಷ ರೂಪಾಯಿ ಸಾಲ ಒದಗಿಸುತ್ತಿದ್ದು, ಇದೀಗ ತರುಣ್ ಪ್ಲಸ್ ಎಂಬ ಸಾಲ ಯೋಜನೆಯನ್ನು ಜಾರಿಗೆ ತಂದಿದ್ದು, ಗರಿಷ್ಠ ೨೦ ಲಕ್ಷ ರೂಪಾಯಿವರೆಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ. ಪಿಎಂ ಮುದ್ರಾ ಯೋಜನೆಗೆ ಹತ್ತು ವರ್ಷ ತುಂಬಿದೆ. ಈ ಹಿನ್ನೆಲೆಯಲ್ಲಿ ಫಲಾನುಭವಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಈ ಯೋಜನೆಯಿಂದ ತಮ್ಮ ಜೀವನ ರೂಪಾಂತರಗೊಂಡ ಎಲ್ಲರಿಗೂ ಅಭಿನಂದಿಸುತ್ತೇನೆ. ಈ ದಶಕದಲ್ಲಿ, ಮುದ್ರಾ ಯೋಜನೆಯು ಹಲವಾರು ಕನಸುಗಳನ್ನು ವಾಸ್ತವಕ್ಕೆ ಪರಿವರ್ತಿಸಿದೆ, ಹಿಂದೆ ಕಡೆಗಣಿಸಲ್ಪಟ್ಟಿದ್ದ ಜನರಿಗೆ ಆರ್ಥಿಕ

ಬೆಂಬಲದೊಂದಿಗೆ ಅಭ್ಯುದಯ ಹೊಂದಲು ಅಧಿಕಾರ ನೀಡಿದೆ ಎಂದು ಹೇಳಿದ್ದಾರೆ. ಈ ಯೋಜನೆಯಡಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಶೇಕಡ ೭೦ರಷ್ಟು ಫಲಾನುಭವಿಗಳು ಮಹಿಳೆಯರು. ಮುದ್ರಾ ಸಾಲ ಯೋಜನೆ ಒಂದು ಉಜ್ವಲ ಅವಕಾಶವಾಗಿದ್ದು, ಘನತೆ ಮತ್ತು ವ್ಯಕ್ತಿ ಗೌರವಕ್ಕೆ ಇದು ಸಾಕ್ಷಿಯಾಗಿದೆ. ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಇದು ಭದ್ರಬುನಾದಿಯಾಗಿದೆ ಎಂದರು.

**ಧ್ವನಿ: ಪಿಎಂ ೫೩ ಸೆಕೆಂಡ್‌ಗಳು**

<><><><>

ಮುದ್ರಾ ಯೋಜನೆಯಡಿ ಪಡೆದ ಸಾಲಗಳ ಪೈಕಿ ಶೇಕಡ ೩.೫ ರಷ್ಟು ಮಾತ್ರ ಅನುತ್ಪಾದಕ ಆಸ್ತಿಯಾಗಿದ್ದು, ಇದು ಜಗತ್ತಿನಲ್ಲಿ ಅತ್ಯಂತ ಕಡಿಮೆ ಪ್ರಮಾಣವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಆಂಗ್ಲ ಪತ್ರಿಕೆಗೆ ಸಂದರ್ಶನ ನೀಡಿರುವ ಪ್ರಧಾನಮಂತ್ರಿಯವರು, ಮುದ್ರಾ ಯೋಜನೆಯಡಿ ಸಾಲ ಪಡೆದವರು ಸಮರ್ಪಕವಾಗಿ ಮರು ಪಾವತಿ ಮಾಡುತ್ತಿದ್ದಾರೆ. ಹಿಂದಿನ ಯುಪಿಎ ಸರ್ಕಾರದ ಆಡಳಿತದಲ್ಲಿ ಬ್ಯಾಂಕಿಂಗ್ ಸೌಲಭ್ಯ ನಿರ್ದಿಷ್ಟ ವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗುತ್ತಿತ್ತು. ಆದರೆ ಇದೀಗ ಎಲ್ಲಾ ವರ್ಗದವರಿಗೆ ಅವಕಾಶ ದೊರೆಯುತ್ತಿದೆ. ಆರ್ಥಿಕ ಸ್ಥಿರತೆಗೆ ಇದು ಬುನಾದಿಯಾಗಿದೆ. ತ್ವರಿತವಾಗಿ ಉದ್ಯಮ ಶೀಲತೆಯನ್ನು ಬೆಳೆಸಲು ಸಹಕಾರಿಯಾಗಿದೆ ಎಂದಿದ್ದಾರೆ.

<><><><>

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಇಂದಿನಿಂದ ಪೋಷನ್ ಪಕ್ವಾಡದ ೭ನೇ ಆವೃತ್ತಿಯನ್ನು ಆರಂಭಿಸಿದೆ. ದೇಶಾದ್ಯಂತ ಅಪೌಷ್ಟಿಕತೆ ನಿಭಾಯಿಸುವ ಉದ್ದೇಶದಿಂದ ಈ ಅಭಿಯಾನ ನಡೆಸಲಾಗುತ್ತಿದೆ. ಈ ವರ್ಷದ ಪೋಷನ್ ಪಕ್ವಾಡ ನಾಲ್ಕು ಪ್ರಮುಖ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ - ಜೀವನದ ಮೊದಲ ಒಂದು ಸಾವಿರ ದಿನಗಳಲ್ಲಿ ಆರೈಕೆ, ಪೋಷನ್ ಫಲಾನುಭವಿ ಮಾದರಿಯನ್ನು ಜನಪ್ರಿಯಗೊಳಿಸುವ, ಅಪೌಷ್ಟಿಕತೆಯ ಪರಿಣಾಮಕಾರಿ ನಿರ್ವಹಣೆ ಮತ್ತು ಬಾಲ್ಯದ ಸ್ಥೂಲಕಾಯತೆಯನ್ನು ಪರಿಹರಿಸಲು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಗುರಿ ಹೊಂದಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಪ್ರಾರಂಭಿಸಿದ ಪ್ರಮುಖ ಉಪಕ್ರಮವಾದ ಪೋಶನ್ ಅಭಿಯಾನವು ಗರ್ಭಿಣಿಯರು, ಹಾಲುಣಿಸುವ ತಾಯಂದಿರು, ಹದಿಹರೆಯದ ಬಾಲಕಿಯರು ಮತ್ತು ಆರು ವರ್ಷದೊಳಗಿನ ಮಕ್ಕಳಿಗೆ ಪೌಷ್ಠಿಕಾಂಶದ ಫಲಿತಾಂಶಗಳನ್ನು ಸುಧಾರಿಸುವ ಗುರಿ ಹೊಂದಿದೆ. ಪೋಷನ್ ಪಕ್ವಾಡ ಈ ವರೆಗೆ ಆರು ಯಶಸ್ವಿ ಆವೃತ್ತಿಗಳನ್ನು ಆಯೋಜಿಸಿದ್ದು, ಇದು ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನದಡಿ ಜಾಗೃತಿ ಮತ್ತು ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಕೊಡುಗೆ ನೀಡಿದೆ.

<><><><>

ಪಂಜಾಬ್ ನ ಜಲಂಧರ್‌ನಲ್ಲಿರುವ ಬಿಜೆಪಿ ಹಿರಿಯ ನಾಯಕ ಮತ್ತು ಮಾಜಿ ಸಚಿವ ಮನೋರಂಜನ್ ಕಾಲಿಯಾ ಅವರ ನಿವಾಸದ ಮೇಲೆ ನಿನ್ನೆ ತಡರಾತ್ರಿ ಗ್ರೆನೇಡ್‌ನಂತಹ ವಸ್ತುವನ್ನು ಎಸೆಯಲಾಗಿದೆ. ಆ ಸಮಯದಲ್ಲಿ ಮನೆಯಲ್ಲಿದ್ದ ಕಾಲಿಯಾ ಯಾವುದೇ ಅಪಾಯವಿಲ್ಲದೇ ಪಾರಾಗಿದ್ದಾರೆ. ನಮ್ಮ ಜಲಂಧರ್ ಪ್ರತಿನಿಧಿಯೊಂದಿಗೆ ಮಾತನಾಡಿದ ಕಾಲಿಯಾ, ಸಿಸಿಟಿವಿ ದೃಶ್ಯಾವಳಿಗಳ ಪ್ರಕಾರ, ದಾಳಿಕೋರ ಇ-ರಿಕ್ಷಾದಲ್ಲಿ ಬಂದು ತನ್ನ ಮನೆಯ ಮೇಲೆ ಗ್ರೆನೇಡ್ ಎಸೆದಿರುವುದಾಗಿ ತಿಳಿಸಿದ್ದಾರೆ. ಜಲಂಧರ್ ಪೊಲೀಸ್ ಆಯುಕ್ತ ಧನಪ್ರೀತ್ ಕೌರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಫೋಟದ ಮಾದರಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಕ್ಕೆ ರವಾನಿಸಲಾಗಿದೆ ಎಂದು ಹೇಳಿದರು.

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ಸುಂಕ ಹೆಚ್ಚಳದ ಘೋಷಣೆಯಿಂದ ಜಾಗತಿಕ ಷೇರು ಮಾರುಕಟ್ಟೆ ಕುಸಿತ ಮುಂದುವರೆಯುವಂತಾಗಿದೆ. ನಿನ್ನೆ ಸತತ ನಾಲ್ಕನೇ ಅಧಿವೇಶನದಲ್ಲೂ ಯುರೋಪಿಯನ್ ಷೇರುಗಳು ಕುಸಿದವು. ಏತನ್ಮಧ್ಯೆ, ಹೆಚ್ಚುತ್ತಿರುವ ವ್ಯಾಪಾರ ಉದ್ವಿಗ್ನತೆಯ ನಡುವೆ ಭಾರತದ ದೇಶೀಯ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸುಮಾರು ಮೂರು ಪ್ರತಿಶತದಷ್ಟು ಕುಸಿತ ದಾಖಲಿಸಿತ್ತು. ಇಂದು ಹೆಚ್ಚಿನ ಏಷ್ಯಾದ ಮಾರುಕಟ್ಟೆಗಳು ಏರಿಕೆಯೊಂದಿಗೆ ಶುಭಾರಂಭ ಮಾಡಿದವು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಜಪಾನ್ ಪ್ರಧಾನಿ ಶಿಗೇರು ಇಶಿಬಾ ನಿನ್ನೆ ದೂರವಾಣಿ ಮಾತುಕತೆ ನಡೆಸಿದ ನಂತರ ನಂತರ ಜಪಾನ್‌ನ ಷೇರು ಮಾರುಕಟ್ಟೆ ಚೇತರಿಕೆ ಕಂಡಿದೆ. ದಕ್ಷಿಣ ಕೊರಿಯಾದಲ್ಲಿ, ಕೋಸ್ಪಿ ಶೇಕಡ ೧.೭ ರಷ್ಟು ಮತ್ತು ಸ್ಮಾಲ್-ಕ್ಯಾಪ್ ಕೊಸ್ಡಾಕ್ ಶೇಕಡ ೨.೩೫ ರಷ್ಟು ಏರಿಕೆ ಕಂಡಿತು. ಚೀನಾದ ಷೇರು ಮಾರುಕಟ್ಟೆ ಚೇತರಿಸಿಕೊಂಡಿದೆ. ಚೀನಾದ ಶಾಂಘೈ ಕಾಂಪೋಸಿಟ್ ಶೇಕಡ ೦.೮ ಕ್ಕೆ ಕುಂಟುತ್ತಾ ಚೇತರಿಕೆ ಕಂಡರೆ, ಹಾಂಗ್ ಕಾಂಗ್‌ನ ಹ್ಯಾಂಗ್ ಸೆಂಗ್ ಸೂಚ್ಯಂಕ ಶೇಕಡ ೩ ರಷ್ಟು ಬೆಳವಣಿಗೆ ಕಂಡಿತು. ನಿನ್ನೆ ಶೇಕಡ ೧೩.೨ ರಷ್ಟು ಕುಸಿದು ಅನುಭವಿಸಿದ ಕೆಲವು ಬೃಹತ್ ನಷ್ಟಗಳಿಂದ ಸ್ವಲ್ಪ ಮಟ್ಟಿಗೆ ಹೊರ ಬಂತು.

<><><><>

ಏತನ್ಮಧ್ಯೆ, ತೈವಾನ್‌ನಲ್ಲಿ ಇನ್ನೂ ಶೇ ೪ ರಷ್ಟು ಕುಸಿತ ಕಂಡುಬಂದಿದೆ. ಇಂಡೋನೇಷ್ಯಾದ ಷೇರು ಮಾರುಕಟ್ಟೆ ಇಂದು ಆರಂಭಿಕ ವಹಿವಾಟಿನಲ್ಲಿ ಶೇ ೯ ರಷ್ಟು ಕುಸಿತ ಕಂಡಿದ್ದು, ಇದರ ಪರಿಣಾಮ ೩೦ ನಿಮಿಷಗಳ ಕಾಲ ವಹಿವಾಟು ಸ್ಥಗಿತಗೊಂಡಿತ್ತು. ಜಾಗತಿಕ ಷೇರು ಮಾರುಕಟ್ಟೆಯಲ್ಲಿನ ಈ ಪ್ರಕ್ಷುಬ್ಧತೆಯ ನಡುವೆ, ವಿಶ್ವ ನಾಯಕರು ಟ್ರಂಪ್ ಅವರ ಸುಂಕ ಕ್ರಮಗಳ ವಿರುದ್ಧ ಧನಿ ಎತ್ತಿದ್ದಾರೆ. ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್, ಬ್ರಿಟನ್ ಸರಕುಗಳ ಮೇಲೆ ಹೊಸದಾಗಿ ವಿಧಿಸಲಾದ ಅಮೆರಿಕ ಸುಂಕಗಳು ಜಾಗತಿಕ ಆರ್ಥಿಕತೆ ಮತ್ತು ಬ್ರಿಟನ್‌ನ ಕೈಗಾರಿಕಾ ನೆಲೆ ಎರಡಕ್ಕೂ ಗಂಭೀರ ಬೆದರಿಕೆ ಒಡ್ಡುತ್ತವೆ ಎಂದು ಹೇಳಿದ್ದಾರೆ. ರಷ್ಯಾದ ವಕ್ತಾರ ಡಿಮಿಟ್ರಿ ಪೆಸ್ಕೋವ್ ಮಾತನಾಡಿ, ಅಮೆರಿಕ ವ್ಯಾಪಕವಾಗಿ ಸುಂಕ ಹೆಚ್ಚಳ ಮಾಡಿರುವುದು ಖಂಡನೀಯ. ಇದು ಜಾಗತಿಕ ಆರ್ಥಿಕ ಸ್ಥಿರತೆಯನ್ನು ದುರ್ಬಲಗೊಳಿಸುತ್ತಿದೆ. ರಷ್ಯಾ ಪ್ರಸ್ತುತ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಹೇಳಿದರು. ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಪ್ರೊಫೆಸರ್ ಮುಹಮ್ಮದ್ ಯೂನಸ್ ಅವರು ಬಾಂಗ್ಲಾದೇಶದ ಉತ್ಪನ್ನಗಳ ಮೇಲೆ ಶೇಕಡಾ ೩೭ ರಷ್ಟು ಸುಂಕ ಜಾರಿಯನ್ನು ಮೂರು ತಿಂಗಳ ಕಾಲ ಮುಂದೂಡುವಂತೆ ಕೋರಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಪತ್ರ ಬರೆದಿದ್ದಾರೆ.

<><><><>

ಎಐಸಿಸಿಯ ಎಳನೇ ರಾಷ್ಟ್ರೀಯ ಸಮಾವೇಶ ಇಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಪ್ರಾರಂಭವಾಗಲಿದೆ.
ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ನಡೆಯಲಿರುವ ಕಾಂಗ್ರೆಸ್ ಸಮಾವೇಶದಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಹಿರಿಯ ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

**ಧ್ವನಿ: ಅರ್ಪಣ ೩೦ ಸೆಕೆಂಡ್‌ಗಳು**

<><><><>

ಕರ್ನಾಟಕದಲ್ಲಿ ಕಳೆದ ಮಾರ್ಚ್‌ನಲ್ಲಿ ನಡೆದ ಪಿಯುಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದೆ. ಒಟ್ಟಾರೆ ಶೇಕಡ ೭೩.೪೫ ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಕಲಾ ವಿಭಾಗದಲ್ಲಿ ಶೇಡಕ ೫೩.೨೯, ವಾಣಿಜ್ಯ ವಲಯದಲ್ಲಿ ಶೇಕಡ ೭೬.೦೭ ಮತ್ತು ವಿಜ್ಞಾನ ವಿಭಾಗದಲ್ಲಿ ಶೇಕಡ ೮೨.೫೪ ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಎಂದಿನಂತೆ ಬಾಲಕಿಯರೇ ಮೈಲುಗೈ ಸಾಧಿಸಿದ್ದು, ಶೇಕಡ ೭೭.೮೮ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

<><><><>

ಇಂದು ಕೊಲ್ಕತ್ತಾದಲ್ಲಿ ನಡೆಯಲಿರುವ ಇಂಡಿಯನ್ ಪ್ರಿಮೀಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿದ್ದು, ಪಂದ್ಯ ೩.೩೦ಕ್ಕೆ ಪ್ರಾರಂಭವಾಗಲಿದೆ. ರಾತ್ರಿ ೭.೩೦ಕ್ಕೆ ಚಂಡಿಘಡದ ಮಹಾರಾಜ ಯದುವಿಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಮತ್ತೊಂದು ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಸೆಣಸಲಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>